File No. TD/139/TDQ/2022-DO-Trans (Computer No. 954580)

DFA/995779

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: **709**

ಸದಸ್ಯರ ಹೆಸರು : ಶ್ರೀ ಸಿ.ಎನ್.ಮಂಜೇಗೌಡ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : **23-12-2022**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೇಂದ್ರ ಸರ್ಕಾರ ನೂತನವಾಗಿ ಜಾರಿಗೊಳಿಸಿರುವ ಗುಜರಿ ನೀತಿಯಂತೆ (ಸ್ಕ್ರ್ಯಾಪ್ ರೂಲ್ಸ್) ರಾಜ್ಯದಲ್ಲಿ 15 ವರ್ಷಕ್ಕಿಂತ ಹೆಚ್ಚು ಸವೆಸಿರುವ ವಾಹನಗಳನ್ನು ಗುಜರಿಗೆ ಸೇರಿಸುವ ನಿಯಮವನ್ನು ಜಾರಿಗೆ ತರಲಾಗುತ್ತಿದೆಯೇ? | ಕೇಂದ್ರ ಸರ್ಕಾರದ Voluntary Vehicle-Fleet Modernization Program Implementation (VVMP) ರಡಿಯಲ್ಲಿ Registered Vehicle Scrapping Facility (RVSF) / ಗುಜರಿ ನೀತಿ (ಸ್ಕ್ರ್ಯಾಪ್ ರೂಲ್ಸ್) ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿಯೂ ಜಾರಿಗೆ ತರುವ ಬಗ್ಗೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |
| ಆ | ಹಾಗಿದ್ದಲ್ಲಿ, ಈ ನಿಯಮವನ್ನು ರಾಜ್ಯದಲ್ಲಿ ಯಾವಾಗಲಿನಿಂದ ಜಾರಿಗೆ ತರಲಾಗುವುದು. ಹಾಗೂ ಈ ಗುಜರಿ ನೀತಿಯಲ್ಲಿ ರೂಪಿಸಿರುವ ನಿಯಮಗಳೇನು (ವಿವರ ನೀಡುವುದು) | |
| ಇ | 15 ವರ್ಷಕ್ಕಿಂತ ಹೆಚ್ಚು ಹಳೆಯ ವಾಣಿಜ್ಯ ವಾಹನಗಳ ನೋಂದಣಿಯನ್ನು ರದ್ದುಗೊಳಿಸಿದ್ದಲ್ಲಿ ಈ ವಾಹನಗಳನ್ನೇ ನಂಬಿ ಜೀವಿಸುತ್ತಿರುವ ಲಕ್ಷಾಂತರ ಕುಟುಂಬಗಳ ಸ್ಥಿತಿ ಬೀದಿ ಪಾಲಾಗುವುದನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ವಿವರ ನೀಡುವುದು) | ಈ ಯೋಜನೆ ಜಾರಿಗೆ ಬಂದನಂತರ ಕೇಂದ್ರ ಸರ್ಕಾರ ಹೊರಡಿಸಿರುವ ಅಧಿಸೂಚನೆ ಸಂಖ್ಯೆG.S.R.714(E) ದಿನಾಂಕ:4-10-2021 ರಂತೆ ಕ್ರಮ ವಹಿಸಲಾಗುತ್ತದೆ.<br><br>ಕೇಂದ್ರ ಸರ್ಕಾರ ರೂಪಿಸಿರುವ 1989ರ ಕೇಂದ್ರ ಮೋಟಾರು ವಾಹನಗಳ ನಿಯಮ 51-ಎ ರಲ್ಲಿನ ಅವಕಾಶದಂತೆ ಸದರಿ ಯೋಜನೆಯಲ್ಲಿ ವಾಹನ ಮಾಲೀಕರ ಪರವಾಗಿ ರಾಜ್ಯದಲ್ಲಿಯೂ ಕೆಲವು ರಿಯಾಯತಿಗಳನ್ನು ಘೋಷಿಸುವ ಬಗ್ಗೆ ಪರಿಶೀಲಿಸಲಾಗುವುದು.<br><br>15 ವರ್ಷ ಮೀರಿದ ವಾಹನಗಳ ನೋಂದಣಿಯನ್ನು ಕಡ್ಡಾಯವಾಗಿ ರದ್ದುಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಈ. | ಮೊದಲ ಬಾರಿಗೆ ಈ ಗುಜರಿ ನೀತಿಯನ್ನು ಜಾರಿಗೆ ತರುತ್ತಿರುವುದರಿಂದ 15 ವರ್ಷವಾಗಿದ್ದರೂ ಸಹ ಫಿಟ್ ನೆಸ್ ಇರುವ ವಾಹನಗಳಿಗೆ ರಿಯಾಯತಿ ನೀಡುವ ಬಗ್ಗೆ ಸರ್ಕಾರ ಸ್ಪಷ್ಟ ಉತ್ತರ ನೀಡುವುದೇ? | |

ಟಿಡಿ 139 ಟಿಡಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು.



Generated from eOffice by B SREERAMULU, TD-MIN(BS), TRANSPORT MINISTER, Trans on 17/12/2022 03:44 PM